**CCE PF**
**CCE PR**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2018**

**S.S.L.C. EXAMINATION, MARCH / APRIL, 2018**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 06. 04. 2018 ] ಸಂಕೇತ ಸಂಖ್ಯೆ : **85-K**

Date : 06. 04. 2018 ] **CODE NO. : 85-K**

## ವಿಷಯ : ಸಮಾಜ ವಿಜ್ಞಾನ

## Subject : SOCIAL SCIENCE

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh & Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** 10 × 1 = 10 | |
| 1. | ವ್ಯಾಪಾರಸ್ಥರಿಗೆ ಹೆಚ್ಚು ಸೂಕ್ತವಾದ ಬ್ಯಾಂಕ್ ಖಾತೆ | |
| | ***ಉತ್ತರ :*** (B) ಚಾಲ್ತಿ ಖಾತೆ | 1 |
| 2. | 'ವರದಕ್ಷಿಣೆ ನಿಷೇಧ ಕಾಯ್ದೆ' ಜಾರಿಗೆ ಬಂದ ವರ್ಷ | |
| | ***ಉತ್ತರ :*** (A) 1961 | 1 |
| 3. | ಈ ಕೆಳಗಿನವುಗಳಲ್ಲಿ ಪ್ರತ್ಯಕ್ಷ ತೆರಿಗೆ | |
| | ***ಉತ್ತರ :*** (B) ವೈಯಕ್ತಿಕ ವರಮಾನ ತೆರಿಗೆ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

4. **A ಪಟ್ಟಿ**ಯಲ್ಲಿ ಉದ್ಯಮಿಗಳು ಮತ್ತು **B ಪಟ್ಟಿ**ಯಲ್ಲಿ ಅವರಿಂದ ಸ್ಥಾಪಿತವಾದ ಉದ್ಯಮಗಳನ್ನು ನೀಡಲಾಗಿದೆ. ಅವುಗಳಿಗೆ ಸರಿಹೊಂದುವ ಉತ್ತರದ ಗುಂಪನ್ನು ಗುರುತಿಸಿ :

| ***A ಪಟ್ಟಿ*** | ***A ಪಟ್ಟಿ*** |
|---|---|
| (a) ಅಜೀಂ ಪ್ರೇಮ್‌ಜಿ | (i) ಬಯೋಕಾನ್ ನಿಗಮ |
| (b) ಡಾ॥ ಪ್ರತಾಪರೆಡ್ಡಿ | (ii) ಜೆಟ್ ವಾಯುಮಾರ್ಗ |
| (c) ಕಿರಣ್ ಮಜುಮ್‌ದಾರ್ ಷಾ | (iii) ವಿಪ್ರೋ ತಂತ್ರಜ್ಞಾನ |
| (d) ನರೇಶ್ ಗೋಯೆಲ್ | (iv) ಅಪೋಲೋ ಆಸ್ಪತ್ರೆಗಳು |

***ಉತ್ತರ :*** (C) (a) — (iii), (b) — (iv), (c) — (i), (d) — (ii) 1

5. ರಾಜಸ್ತಾನದಲ್ಲಿ ಅತಿ ಹೆಚ್ಚಾಗಿ ಕಂಡುಬರುವ ಮಣ್ಣಿನ ವಿಧ

***ಉತ್ತರ :*** (B) ಮರುಭೂಮಿ ಮಣ್ಣು 1

6. 1909 ರ ಮಿಂಟೋ–ಮಾರ್ಲೆ ಸುಧಾರಣೆಗಳು ಭಾರತದ ವಿಭಜನೆಗೆ ನಾಂದಿ ಹಾಡಿದವು. ಏಕೆಂದರೆ, ಅದು

***ಉತ್ತರ :*** (D) ಮತೀಯ ಆಧಾರದ ಮೇಲೆ ಪ್ರತ್ಯೇಕ ಚುನಾವಣಾ ಕ್ಷೇತ್ರವನ್ನು ಸ್ಥಾಪಿಸಿತು 1

7. ಈ ನಕ್ಷೆಯಲ್ಲಿ ಗುರುತಿಸಿರುವ ಸ್ಥಳಗಳಿಗೆ ಸರಿಯಾಗಿ ಹೋಲಿಕೆಯಾಗುವುದು :




***ಉತ್ತರ :*** (A) 1 — ಅಮೃತಸರ, 2 — ಗುವಾಹಟಿ, 3 — ಹೈದರಾಬಾದ್ 1

8. ಭಾರತವು ನೆಲ್ಸನ್ ಮಂಡೇಲಾರವರನ್ನು ಬೆಂಬಲಿಸಿತು. ಏಕೆಂದರೆ,

***ಉತ್ತರ :*** (B) ಭಾರತದ ವಿದೇಶಾಂಗದ ನೀತಿಯು ವರ್ಣಬೇಧ ನೀತಿಯನ್ನು ವಿರೋಧಿಸುತ್ತದೆ 1

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 9. | ನಾವು 10ನೇ ಡಿಸೆಂಬರನ್ನು 'ಮಾನವ ಹಕ್ಕುಗಳ ದಿನ'ವನ್ನಾಗಿ ಆಚರಿಸುತ್ತೇವೆ. ಏಕಂದರೆ, | |
| | ***ಉತ್ತರ :*** (C) ವಿಶ್ವಸಂಸ್ಥೆ ಸಾರ್ವತ್ರಿಕ ಮಾನವ ಹಕ್ಕುಗಳನ್ನು ಘೋಷಿಸಿದ್ದು 10ನೇ ಡಿಸೆಂಬರ್ 1948 | 1 |
| 10. | ದಯಾನಂದ ಸರಸ್ವತಿಯವರು ಸ್ವಾಭಿಮಾನ ಮತ್ತು ಸ್ವಾವಲಂಬನೆಯ ಬೋಧನೆಗಳ ಮೂಲಕ ಜನರನ್ನು ಪ್ರೇರೇಪಿಸಿದ್ದು | |
| | ***ಉತ್ತರ :*** (C) ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಳ್ಳಲು | 1 |
| II. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು :** 14 × 1 = 14 | |
| 11. | ಜನಸಾಮಾನ್ಯರ ಇತಿಹಾಸವನ್ನು ರಚಿಸುವುದು ಇತಿಹಾಸಕಾರರಿಗೆ ಸವಾಲಾಗಿ ಪರಿಣಮಿಸಿದೆ. ಏಕೆ ? | |
| | ***ಉತ್ತರ :*** | |
| | — ಪೂರಕ ದಾಖಲೆಗಳು ಇಲ್ಲದಿರುವುದರಿಂದ | |
| | — ಜ್ಞಾನ ಕೇಂದ್ರಗಳಿಂದ ದೂರ | |
| | — ಅನಕ್ಷರಸ್ಥರು (ಯಾವುದಾದರೂ ಒಂದು) | 1 |
| 12. | ಸರ್ ಸಯ್ಯದ್ ಅಹಮದ್‌ಖಾನ್‌ರು ಮುಸ್ಲಿಂ ಸಮುದಾಯದಲ್ಲಿ ಹೇಗೆ ಶೈಕ್ಷಣಿಕ ಅರಿವನ್ನು ಮೂಡಿಸಿದರು ? | |
| | ***ಉತ್ತರ :*** | |
| | — ಆಂಗ್ಲೋ ಓರಿಯಂಟಲ್ ಕಾಲೇಜಿನ ಸ್ಥಾಪನೆ | |
| | — ಸ್ತ್ರೀ ಶಿಕ್ಷಣಕ್ಕೆ ಬೆಂಬಲ | |
| | — ವೈಚಾರಿಕ ಚಿಂತನೆ (ಯಾವುದಾದರೂ ಒಂದು) | 1 |
| 13. | ಸಮಾಜವಾದಿ ವ್ಯವಸೆಯು ರಷ್ಯಾದಲ್ಲಿ ಏಕೆ ಕುಸಿಯಿತು ? | |
| | ***ಉತ್ತರ :*** | |
| | ಗೋರ್ಬಚೆವ್‌ರವರ ಗ್ಲಾಸ್‌ನೊಸ್ತ್ ಮತ್ತು ಪೆರಿಸ್ಟ್ರೊಯಿಕ ಸುಧಾರಣೆಗಳಿಂದ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 14. | ಭಾರತದಲ್ಲಿ ಕೋಮುವಾದದ ಬೀಜವನ್ನು ಬಿತ್ತಿದ ಬ್ರಿಟಿಷರ ನೀತಿ ಯಾವುದು ? | |
| | ***ಉತ್ತರ :*** | |
| | ಒಡೆದು ಆಳುವ ನೀತಿ | 1 |
| 15. | 'ವಸಾಹತುಶಾಹಿತ್ವ' ಎಂದರೇನು ? | |
| | ***ಉತ್ತರ :*** | |
| | ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ತನ್ನ ಸ್ವಾರ್ಥಕ್ಕಾಗಿ ದುರಪಯೋಗಪಡಿಸಿಕೊಳ್ಳುವುದು. | 1 |
| 16. | ಚಿಪ್ಕೋ ಚಳುವಳಿಯ ನೇತಾರರು ಯಾರು ? | |
| | ***ಉತ್ತರ :*** | |
| | ಸುಂದರ್‌ಲಾಲ್ ಬಹುಗುಣ ಮತ್ತು ಶ್ರೀ ಚಂಡಿಪ್ರಸಾದ್ ಭಟ್ | 1 |
| 17. | 'ಸರ್ವ ಶಿಕ್ಷಣ ಅಭಿಯಾನವು ಬಾಲಕಾರ್ಮಿಕತೆಯನ್ನು ನಿವಾರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ.' ಹೇಗೆ ? | |
| | ***ಉತ್ತರ :*** | |
| | 'ಕೂಲಿಯಿಂದ ಶಾಲೆಗೆ' ಕಾರ್ಯಕ್ರಮದಡಿಯಲ್ಲಿ ಬಾಲಕಾರ್ಮಿಕರನ್ನು ಶಾಲೆಗೆ ಕರೆತಂದು ಉಚಿತ ಶಿಕ್ಷಣ ನೀಡುತ್ತಿದೆ. | 1 |
| 18. | ಯಾವ ಮಣ್ಣನ್ನು 'ರೇಗೂರ್ ಮಣ್ಣು' ಎಂತಲೂ ಕರೆಯುತ್ತಾರೆ ? | |
| | ***ಉತ್ತರ :*** | |
| | ಕಪ್ಪು ಮಣ್ಣು | 1 |
| 19. | ರಾಷ್ಟ್ರೀಯ ವಿದ್ಯುತ್ ಜಾಲವನ್ನು ಏಕೆ ನಿರ್ಮಿಸಲಾಗಿದೆ ? | |
| | ***ಉತ್ತರ :*** | |
| | ಹೆಚ್ಚುವರಿ ವಿದ್ಯುತ್ತನ್ನು ಕೊರತೆಯಿರುವ ಪ್ರದೇಶಗಳಿಗೆ ಸಾಗಿಸಲು | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 20. | ಕಡಲ ತೀರದುದ್ದಕ್ಕೂ ಮ್ಯಾಂಗ್ರೋವ್ ಅರಣ್ಯಗಳನ್ನು ಏಕೆ ಬೆಳೆಸಬೇಕು ? | |
| | ***ಉತ್ತರ :*** | |
| | ಕಡಲ ಕೊರೆತವನ್ನು ತಡೆಗಟ್ಟಲು | 1 |
| 21. | ಚಂಡಮಾರುತಗಳಿಂದ ಹೆಚ್ಚು ಹಾನಿಗೊಳಗಾಗುವ ಭಾರತದ ರಾಜ್ಯಗಳು ಯಾವುವು ? | |
| | ***ಉತ್ತರ :*** | |
| | ತಮಿಳುನಾಡು, ಆಂಧ್ರ ಪ್ರದೇಶ, ಒರಿಸ್ಸಾ | 1 |
| 22. | ಕೇಂದ್ರ ಆಯವ್ಯಯವನ್ನು ಲೋಕಸಭೆಯಲ್ಲಿ ಮಂಡಿಸುವವರು ಯಾರು ? | |
| | ***ಉತ್ತರ :*** | |
| | ಹಣಕಾಸು ಮಂತ್ರಿ (ವಿತ್ತ ಮಂತ್ರಿ) | 1 |
| 23. | 'ಗ್ರಾಮಗಳ ಅಭಿವೃದ್ಧಿಯೇ ಭಾರತದ ನೈಜ ಅಭಿವೃದ್ಧಿ' ಎಂದು ಹೇಳಿದವರು ಯಾರು ? | |
| | ***ಉತ್ತರ :*** | |
| | ಮಹಾತ್ಮ ಗಾಂಧೀಜಿ | 1 |
| 24. | ಭಾರತದ ರಿಸರ್ವ್ ಬ್ಯಾಂಕನ್ನು 'ಬ್ಯಾಂಕ್‌ಗಳ ತಾಯಿ' ಎಂದು ಏಕೆ ಕರೆಯುತ್ತಾರೆ ? | |
| | ***ಉತ್ತರ :*** | |
| | ಭಾರತದ ಬ್ಯಾಂಕುಗಳ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ. | 1 |
| III. | **ಎರಡು ವಾಕ್ಯಗಳಲ್ಲಿ ಉತ್ತರಿಸುವುದು :** $25 \times 2 = 50$ | |
| 25. | ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿಯಲು ಯುರೋಪಿಯನ್ನರಿಗೆ ಸಹಾಯಕವಾದ ಅಂಶಗಳಾವುವು ? | |
| | ***ಅಥವಾ*** | |
| | ಬಕ್ಸಾರ್ ಕದನದ ಫಲಿತಾಂಶಗಳೇನು ? | |
| | ***ಉತ್ತರ :*** | |
| | — ಟರ್ಕರಿಂದ ಕಾನ್‌ಸ್ಟಾಂಟಿನೋಪಲ್‌ನ ವಶ | |
| | — ಭೂ ಮಾರ್ಗದ ಮುಚ್ಚುವಿಕೆ | |
| | — ಇಟಲಿಯ ವ್ಯಾಪಾರದ ಏಕಸ್ವಾಮ್ಯತೆ ತಡೆಯಲು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಸಮುದ್ರಯಾನಕ್ಕೆ ಯುರೋಪಿಯನ್ ರಾಷ್ಟ್ರಗಳ ಉತ್ತೇಜನ<br>— ವೈಜ್ಞಾನಿಕ ಬೆಳವಣಿಗೆ<br>— ಪೂರ್ವ ದೇಶಗಳ ಸಂಪತ್ತಿನ ಕಥೆಗಳು<br>— ಧರ್ಮ ಪ್ರಚಾರಕರ ಉತ್ಸಾಹ (ಯಾವುದಾದರೂ ನಾಲ್ಕು) 4 × ½ | 2 |
| | **ಅಥವಾ** | |
| | ***ಉತ್ತರ :***<br>— ಷಾ ಆಲಂ, ಷೂಜ ಉದ್ದೌಲ, ಮೀರ್ ಖಾಸಿಂನ ಸಂಯುಕ್ತ ಸೇನೆಯ ಸೋಲು<br>— ಬಂಗಾಳ, ಬಿಹಾರ, ಒರಿಸ್ಸಾ ಇಂಗ್ಲಿಷರ ವಶ<br>— ಷಾ ಆಲಂನಿಂದ ಇಂಗ್ಲಿಷರಿಗೆ ದಿವಾನಿ ಹಕ್ಕು ನೀಡಿಕೆ<br>— ರಾಬರ್ಟ್ ಕ್ಲೈವ್‌ನಿಂದ ದ್ವಿಮುಖ ಸರ್ಕಾರದ ಜಾರಿ ಬಂಗಾಳದಲ್ಲಿ | 2 |
| 26. | ನಾವು ಮೈಸೂರು ಒಡೆಯರನ್ನು ಏಕೆ ಸ್ಮರಿಸುತ್ತೇವೆ ?<br>***ಉತ್ತರ :***<br>— ಯದುರಾಯ — ಕೃಷ್ಣರಾಯರು — ಸ್ಥಾಪಕರು<br>— ರಾಜ ಒಡೆಯರು – ಶ್ರೀರಂಗಪಟ್ಟಣದ ವಶ – ಮೈಸೂರನ್ನು ರಾಜಧಾನಿ ಮಾಡಿದರು.<br>— ಕಂಠೀರವ ನರಸರಾಜ ಮತ್ತು ಚಿಕ್ಕದೇವರಾಜರು, ಸಾಮ್ರಾಜ್ಯದ ವಿಸ್ತಾರ ಮತ್ತು ಸರ್ವಾಂಗೀಣ ಅಭಿವೃದ್ಧಿ<br>— ನಾಲ್ಕನೇ ಕೃಷ್ಣರಾಜ ಒಡೆಯರು – ರಾಮ ರಾಜ್ಯ – ಮುಂದುವರಿದ ರಾಜ ಸಂಸ್ಥಾನ | 2 |
| 27. | ‘ಭಾಷೆಯ ಆಧಾರದ ಮೇಲೆ ಆಂಧ್ರ ಪ್ರದೇಶದ ರಚನೆ ಭಾರತ ಸರ್ಕಾರಕ್ಕೆ ಅನಿವಾರ್ಯವಾಗಿತ್ತು.’ ಏಕೆ ?<br>***ಉತ್ತರ :***<br>— ಪೊಟ್ಟಿ ಶ್ರೀರಾಮುಲು – 58 ದಿನಗಳ ಕಾಲ ಅಮರಣಾಂತ ಉಪವಾಸ ಸತ್ಯಾಗ್ರಹ<br>— ಪರಿಣಾಮಕಾರಿ / ಉತ್ತಮ ಆಡಳಿತ ಒದಗಿಸಲು<br>— ಭಾಷಾವಾರು ರಾಜ್ಯಗಳಿಗಾಗಿ ಹೋರಾಟ<br>— ಭಾಷೆಯನ್ನು ಆಧರಿಸಿ ಭೌಗೋಳಿಕ ಗಡಿ ಗುರುತಿಸಲು ಒತ್ತಾಯ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 28. | 'ಜೋಸೆಫ್ ಸ್ಟಾಲಿನ್ ರಷ್ಯಾವನ್ನು ಅಮೆರಿಕಾಕ್ಕೆ ಸವಾಲಾಗುವಂತೆ ನಿರ್ಮಾಣ ಮಾಡಿದರು' ಹೇಗೆ ?<br>*ಉತ್ತರ :*<br>— ಪಂಚವಾರ್ಷಿಕ ಯೋಜನೆಗಳ ಜಾರಿ<br>— ವಿಶ್ವದ ಮೊದಲ ಮಾನವ ಸಹಿತ ಉಪಗ್ರಹ ಉಡಾವಣೆಗೆ ಉತ್ತೇಜನ<br>— ಸಮಾಜವಾದಿ ರಾಷ್ಟ್ರಗಳ ಬಣದ ನಾಯಕತ್ವ<br>— ಏಷ್ಯಾ, ಆಫ್ರಿಕಾ ಮತ್ತು ಅಮೆರಿಕಾ ದೇಶಗಳ ವಿಮೋಚನಾ ಹೋರಾಟಗಳಿಗೆ ಬೆಂಬಲ<br>(ಯಾವುದಾದರೂ ಎರಡು) | 2 |
| 29. | ಅನಕ್ಷರತೆಯ ನಿರ್ಮೂಲನೆಗಾಗಿ ಭಾರತ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ?<br>*ಉತ್ತರ :*<br>— ಸರ್ವ ಶಿಕ್ಷಣ ಅಭಿಯಾನ<br>— ರಾಷ್ಟ್ರೀಯ ಸಾಕ್ಷರತಾ ಮಿಷನ್<br>— 'ಸಾಕ್ಷರ ಭಾರತ್' ಕಾರ್ಯಕ್ರಮ<br>— 'ಶಿಕ್ಷಣ ಹಕ್ಕು ಕಾಯ್ದೆ'<br>— 6-14 ವರ್ಷದ ಮಕ್ಕಳಿಗೆ ಕಡ್ಡಾಯ ಉಚಿತ ಶಿಕ್ಷಣ<br>— ವಿಕಲಚೇತನರ ಮತ್ತು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ<br>(ಯಾವುದಾದರೂ ನಾಲ್ಕು) $4 \times \frac{1}{2}$ | 2 |
| 30. | ಜಾಗತಿಕ ಸಮಸ್ಯೆಗಳನ್ನು ಪರಿಹರಿಸಲು ಆಹಾರ ಮತ್ತು ಕೃಷಿ ಸಂಸ್ಥೆ ಹೇಗೆ ಕಾರ್ಯ ನಿರ್ವಹಿಸುತ್ತಿದೆ ?<br>*ಉತ್ತರ :*<br>— ಕೃಷಿ ಕ್ಷೇತ್ರದ ಅಭಿವೃದ್ಧಿ<br>— ಪೌಷ್ಠಿಕ ಆಹಾರ ಒದಗಿಸುವಿಕೆ<br>— ಹಸಿವೆಯಿಂದ ಜಾಗತಿಕ ಸಮುದಾಯದ ವಿಮುಕ್ತಿ<br>— ಗ್ರಾಮೀಣ ಜನರ ಜೀವನ ಮಟ್ಟದ ಸುಧಾರಣೆ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 31. | 'ಭಾರತದಲಿ ಅಸ್ಪೃಶ್ಯತೆಯ ಆಚರಣೆಯು ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದೆ.' ಕಾರಣಗಳನ್ನು ಕೊಡಿ.<br>*ಉತ್ತರ :*<br>— ಸಾಕ್ಷರತೆಯ ಹೆಚ್ಚಳ<br>— ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳು<br>— ಸಾರ್ವಜನಿಕ ಜಾಗೃತಿ<br>— ನಗರೀಕರಣ (ಯಾವುದಾದರೂ ಎರಡು) | 2 |
| 32. | ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಹಾಗೂ ಲಕ್ಷದ್ವೀಪಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.<br>*ಉತ್ತರ :*<br>***ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು*** — ***ಲಕ್ಷ ದ್ವೀಪಗಳು***<br>i) ಬಂಗಾಳ ಕೊಲ್ಲಿಯಲ್ಲಿವೆ — i) ಅರಬ್ಬೀ ಸಮುದ್ರದಲ್ಲಿವೆ<br>ii) ಗಟ್ಟಿಯಾದ ಜ್ವಾಲಾಮುಖಿ ನಿರ್ಮಿತ ಶಿಲೆಗಳಿಂದ ನಿರ್ಮಿತವಾಗಿವೆ — ii) ಹವಳಗಳಿಂದ ನಿರ್ಮಿತವಾಗಿವೆ<br>iii) 204 ದ್ವೀಪಗಳು — iii) 43 ದ್ವೀಪಗಳು<br>(ಯಾವುದಾದರೂ ಎರಡು) | 2 |
| 33. | 'ಭಾರತದ ವಾಯುಗುಣವು ತನ್ನ ಆರ್ಥಿಕ ಬೆಳವಣಿಗೆಯ ಮೇಲೆ ಪ್ರಭಾವ ಬೀರುತ್ತದೆ.' ಸಮರ್ಥಿಸಿ.<br>*ಉತ್ತರ :*<br>— ಕೃಷಿ ಪ್ರಧಾನ ಉದ್ಯೋಗವಾಗಿದ್ದು, ನೈರುತ್ಯ ಮಾನ್ಸೂನ್ ಮಾರುತಗಳಿಂದ ನಿಯಂತ್ರಣ<br>— ನಿಯತಕಾಲಿಕ, ಅನಿಶ್ಚಿತತೆ ಮತ್ತು ಅಸಮಾನ ಹಂಚಿಕೆಯಿಂದ ಕೂಡಿದ ಮಳೆ<br>— ಮಾನ್ಸೂನ್ ಮಳೆಯ ವಿಫಲತೆಯಿಂದ ಬರಗಾಲ, ಅತಿ ಹೆಚ್ಚು ಮಳೆಯಿಂದ ಪ್ರವಾಹ<br>— ಪ್ರಾಣ ಹಾನಿ ಮತ್ತು ಆಸ್ತಿ ಹಾನಿಗಳಿಗೆ ಕಾರಣ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 34. | ಈ ಕೆಳಗೆ ಕೊಟ್ಟಿರುವ ಮರಗಳನ್ನು ಉಷ್ಣವಲಯದ ಹುಲ್ಲುಗಾವಲು ಮತ್ತು ಹಿಮಾಲಯದ ಅಲ್ಪೈನ್ ಅರಣ್ಯಗಳ ಅಡಿಯಲ್ಲಿ ವರ್ಗೀಕರಿಸಿ ಬರೆಯಿರಿ :<br>ಸಿಲ್ವರ್, ಬಬೂಲ್, ಶಿಷಮ್, ಲಾರೆಲ್.<br>*ಉತ್ತರ :*<br>— ಉಷ್ಣವಲಯದ ಹುಲ್ಲುಗಾವಲು – *ಶಿಷಮ್, ಬಬೂಲ್*<br>— ಹಿಮಾಲಯ ಅಲ್ಪೈನ್ ಅರಣ್ಯಗಳು – *ಸಿಲ್ವರ್, ಲಾರೆಲ್* | 2 |
| 35. | ಖರೀಫ್ ಮತ್ತು ರಬಿ ಋತುಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.<br>*ಉತ್ತರ :* | |

| ***ಖರೀಫ್ ಋತು*** | ***ರಬಿ ಋತು*** |
|---|---|
| i) ನೈರುತ್ಯ ಮಾನ್ಸೂನ್ ಮಾರುತಗಳ ಅವಧಿ | i) ಹಿಂಗಾರು ಅಥವಾ ಚಳಿಗಾಲದ ಅವಧಿ |
| ii) ಜೂನ್–ಜುಲೈನಲ್ಲಿ ಬಿತ್ತನೆ ಮತ್ತು ಸೆಪ್ಟಂಬರ್, ಅಕ್ಟೋಬರ್‌ನಲ್ಲಿ ಕಟಾವು | ii) ಅಕ್ಟೋಬರ್–ನವಂಬರ್‌ನಲ್ಲಿ ಬಿತ್ತನೆ ಮತ್ತು ಫೆಬ್ರವರಿ–ಮಾರ್ಚ್‌ನಲಿ ಕಟಾವು |
| iii) ಭತ್ತ ಪ್ರಮುಖ ಬೆಳೆ | iii) ಗೋಧಿ ಪ್ರಮುಖ ಬೆಳೆ |

(ಯಾವುದಾದರೂ ಎರಡು) 2

| | | |
|---|---|---|
| 36. | ನೈಸರ್ಗಿಕ ವಿಕೋಪಗಳ ಸಮಯದಲ್ಲಿ ದೂರಸಂವೇದಿ ತಂತ್ರಜ್ಞಾನವು ಹೇಗೆ ಉಪಯುಕ್ತವಾಗಿದೆ ?<br>*ಉತ್ತರ :*<br>— ಚಂಡಮಾರುತ<br>— ಬಿರುಗಾಳಿ<br>— ಪ್ರವಾಹ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಬರಗಾಲ<br>— ಭೂಕುಸಿತ<br>— ಭೂಕಂಪ ಇತ್ಯಾದಿಗಳ ಸಮಯದಲ್ಲಿ ಆದ ಅನಾಹುತಗಳ ತೀವ್ರತೆಯ ಅಧ್ಯಯನಕ್ಕೆ ಚಿತ್ರಗಳನ್ನು ಒದಗಿಸುತ್ತದೆ.<br>(ವೈಮಾನಿಕ ಮತ್ತು ಉಪಗ್ರಹಗಳಿಂದ ಪಡೆದ ಚಿತ್ರ) | 2 |
| 37. | 'ಜನಸಂಖ್ಯಾ ಹೆಚ್ಚಳವು ಹಲವಾರು ಸಮಸ್ಯೆಗಳಿಗೆ ಕಾರಣವಾಗಿದೆ.' ಸಮರ್ಥಿಸಿ.<br>***ಉತ್ತರ :***<br>— ನಿರುದ್ಯೋಗ<br>— ಆಹಾರ ಮತ್ತು ಪೌಷ್ಠಿಕಾಂಶದ ಕೊರತೆ<br>— ಅನಕ್ಷರತೆ<br>— ಬಡತನ<br>— ವಸತಿ ಸೌಲಭ್ಯದ ಕೊರತೆ<br>— ಆರೋಗ್ಯ ಮತ್ತು ನೈರ್ಮಲ್ಯದ ಸಮಸ್ಯೆ<br>— ನೀರಿನ ಸಮಸ್ಯೆ<br>— ಕಡಿಮೆ ತಲಾ ಆದಾಯ<br>— ನಿಧಾನಗತಿಯ ಆರ್ಥಿಕ ಪ್ರಗತಿ<br>— ರಾಜಕೀಯ ಅಶಾಂತಿ<br>— ಸಾಮಾಜಿಕ ಸಮಸ್ಯೆಗಳು<br>— ನಾಗರಿಕ ಸೌಲಭ್ಯಗಳ ಕೊರತೆ (ಯಾವುದಾದರೂ ನಾಲ್ಕು) $4 \times \frac{1}{2}$ | 2 |
| 38. | ಒಂದು ದೇಶದ 'ನೈಜ ಅಭಿವೃದ್ಧಿಯನ್ನು' ಹೇಗೆ ಸಾಧಿಸಬಹುದು ?<br>***ಉತ್ತರ :***<br>— ಸರಕು ಮತ್ತು ಸೇವೆಗಳು ಹಾಗೂ ಆದಾಯದ ಸಮಾನ ಹಂಚಿಕೆಯಿಂದ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ತಲಾದಾಯದ ಹೆಚ್ಚಳದಿಂದ | |
| | — ಬಡತನ, ನಿರುದ್ಯೋಗ, ಅಸಮಾನತೆಯ ನಿವಾರಣೆಯಿಂದ | |
| | — ಎಲ್ಲಾ ಜನರಿಗೂ ಪೌಷ್ಠಿಕ ಆಹಾರ, ಬಟ್ಟೆ, ವಸತಿ, ಗುಣಾತ್ಮಕ ಶಿಕ್ಷಣ, ಆರೋಗ್ಯ, ನೈರ್ಮಲ್ಯ ಸೌಲಭ್ಯ ಇತ್ಯಾದಿಗಳ ನೀಡಿಕೆಯಿಂದ | 2 |
| 39. | 'ಜಾಗತೀಕರಣವು ಪರಿಸರದ ಅವನತಿಗೆ ಕಾರಣವಾಗುತ್ತದೆ.' ಹೇಗೆ ? | |
| | ***ಉತ್ತರ :*** | |
| | — ನಗರೀಕರಣ | |
| | — ಕೈಗಾರಿಕಾ ತ್ಯಾಜ್ಯಗಳ ಶೇಖರಣೆ | |
| | — ಕಸದ ತೊಟ್ಟಿಗಳಾಗಿ ಪರಿವರ್ತನೆ | |
| | — ಕೈಗಾರಿಕೀಕರಣ – ವಾಯು ಮಾಲಿನ್ಯ, ಶಬ್ಧ ಮಾಲಿನ್ಯ | 2 |
| 40. | ಹೈದರಾಬಾದ್–ಕರ್ನಾಟಕದ ಪ್ರದೇಶಗಳನ್ನು ಹೆಸರಿಸಿ. | |
| | ***ಉತ್ತರ :*** | |
| | — ಬೀದರ್ | |
| | — ಕಲಬುರಗಿ | |
| | — ಯಾದಗಿರಿ | |
| | — ರಾಯಚೂರು | |
| | — ಬಳ್ಳಾರಿ | |
| | — ಕೊಪ್ಪಳ (ಯಾವುದಾದರೂ ನಾಲ್ಕು) 4 × ½ | 2 |
| 41. | ಭಾರತದ ಪ್ರಮುಖ ಸಮಾಜ ಸುಧಾರಕರನ್ನು ಹೆಸರಿಸಿ. | |
| | ***ಉತ್ತರ :*** | |
| | — ರಾಜಾ ರಾಮ್‌ಮೋಹನ ರಾಯ್ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ದಯಾನಂದ ಸರಸ್ವತಿ<br>— ಆತ್ಮರಾಮ ಪಾಂಡುರಂಗ<br>— ಜ್ಯೋತಿಭಾ ಫುಲೆ<br>— ಸ್ವಾಮಿ ವಿವೇಕಾನಂದ<br>— ಸರ್ ಸಯ್ಯದ್ ಅಹಮದ್ ಖಾನ್<br>— ಮಹಾದೇವ ಗೋವಿಂದ ರಾನಡೆ<br>— ಆ್ಯನಿಬೆಸೆಂಟ್ (ಯಾವುದಾದರೂ ನಾಲ್ಕು) 4 × ½ | 2 |
| 42. | ಭಾರತದ ವಿದೇಶಾಂಗ ನೀತಿಯ ಉದ್ದೇಶಗಳಾವುವು ?<br>***ಉತ್ತರ :***<br>— ರಾಷ್ಟ್ರದ ಭದ್ರತೆ<br>— ರಾಷ್ಟ್ರದ ಆರ್ಥಿಕ ಸಂವರ್ಧನೆ<br>— ನಮ್ಮ ದೇಶದ ಸಾಂಸ್ಕೃತಿಕ ಮೌಲ್ಯಗಳನ್ನು ವಿದೇಶಗಳಲ್ಲಿ ಬಿತ್ತರಿಸುವುದು<br>— ಮಿತ್ರರಾಷ್ಟ್ರಗಳ ಸಂಖ್ಯೆಯನ್ನು ಹೆಚ್ಚಿಕೊಳ್ಳುವುದು<br>— ವಿಶ್ವಶಾಂತಿ ಮತ್ತು ಸಹಬಾಳ್ವೆಯನ್ನು ಸಾಧಿಸುವುದು. (ಯಾವುದಾದರೂ ಎರಡು) | 2 |
| 43. | ಭಯೋತ್ಪಾದನೆಯಿಂದ ಉಂಟಾಗುವ ಪರಿಣಾಮಗಳೇನು ?<br>***ಉತ್ತರ :***<br>— ವ್ಯಕ್ತಿಗಳಿಗೆ ಮತ್ತು ಸೊತ್ತುಗಳಿಗೆ ಅಪಾರಹಾನಿ<br>— ಮಾನಸಿಕ ವೇದನೆ<br>— ಸಾಮಾಜಿಕ ಸಂಸ್ಕೃತಿ ಮತ್ತು ಸರ್ಕಾರದ ಮೇಲೆ ನಕಾರಾತ್ಮಕ ಪರಿಣಾಮ<br>— ಭಯದ ವಾತಾವರಣದ ಸೃಷ್ಟಿ<br>— ಅಪಾರ ಸಾವು–ನೋವು (ಯಾವುದಾದರೂ ಎರಡು) | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 44. | ಅಸ್ಪೃಶ್ಯತೆಯ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ?<br>***ಉತ್ತರ :***<br>— ಅಸ್ಪೃಶ್ಯತಾ ಆಚರಣೆಯ ನಿಷೇಧ (17ನೇ ವಿಧಿ)<br>— ಅಸ್ಪೃಶ್ಯತಾ ಅಪರಾಧಗಳ ಕಾಯಿ, 1955<br>— ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ, 1976<br>— ಸಾರ್ವತ್ರಿಕ ಮತದಾನ, ಸಮಾನತೆಯ ಹಕ್ಕು<br>— ಶೈಕ್ಷಣಿಕ, ರಾಜಕೀಯ, ಆರ್ಥಿಕ, ಉದ್ಯೋಗ ಕ್ಷೇತ್ರಗಳಲ್ಲಿ ಮೀಸಲಾತಿ<br>— ರಾಜ್ಯ ಸರ್ಕಾರಗಳಿಗೆ ವಿಶೇಷ ಜವಾಬ್ದಾರಿ 1989 ರ ಶಾಸನ<br>— ಎಲ್ಲಾ ನಾಗರಿಕರಿಗೂ ಸಮಾನ ಅವಕಾಶ<br>(ಯಾವುದಾದರೂ ಎರಡು) | 2 |
| 45. | ಭಾರತದ ನಾಲ್ಕು ಪ್ರಧಾನ ಭೂ–ಸ್ವರೂಪಗಳಾವುವು ?<br>***ಉತ್ತರ :***<br>— ಉತ್ತರದ ಪರ್ವತಗಳು<br>— ಉತ್ತರದ ಮಹಾಮೈದಾನ<br>— ಪರ್ಯಾಯ ಪ್ರಸ್ಥಭೂಮಿ<br>— ಕರಾವಳಿ ಮೈದಾನಗಳು ಮತ್ತು ದ್ವೀಪಗಳು | 2 |
| 46. | ಮಣ್ಣಿನ ವಿಧಗಳನ್ನು ಹೆಸರಿಸಿ.<br>***ಉತ್ತರ :***<br>— ಮೆಕ್ಕಲು ಮಣ್ಣು<br>— ಕಪ್ಪು ಮಣ್ಣು<br>— ಕೆಂಪು ಮಣ್ಣು<br>— ಲ್ಯಾಟರೈಟ್ ಮಣ್ಣು<br>— ಮರುಭೂಮಿ ಮಣ್ಣು<br>— ಪರ್ವತದ ಮಣ್ಣು (ಯಾವುದಾದರೂ ನಾಲ್ಕು) $4 \times \frac{1}{2}$ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 47. | ಭಾರತದ ನಾಲ್ಕು ಋತುಮಾನಗಳನ್ನು ಹೆಸರಿಸಿ.<br>***ಉತ್ತರ :***<br>— ಬೇಸಿಗೆ ಕಾಲ<br>— ನೈರುತ್ಯ ಮಾನ್ಸೂನ್ ಕಾಲ ಅಥವಾ ಮುಂಗಾರು ಮಳೆಗಾಲ<br>— ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ ಅಥವಾ ಹಿಂಗಾರು ಮಳೆಗಾಲ<br>— ಚಳಿಗಾಲ | 2 |
| 48. | ಮಾನವ ಅಭಿವೃದ್ಧಿಯ ಸೂಚಕಗಳಾವುವು ?<br>***ಉತ್ತರ :***<br>— ನಿರೀಕ್ಷಿತ ಜೀವಿತಾವಧಿ<br>— ಶೈಕ್ಷಣಿಕ ಸಾಧನೆ<br>— ಜೀವನ ಮಟ್ಟ (ಯಾವುದಾದರೂ ಎರಡು) | 2 |
| 49. | ಬ್ಯಾಂಕುಗಳು ಸಲ್ಲಿಸುವ ಸೇವೆಗಳಾವುವು ?<br>***ಉತ್ತರ :***<br>— ಜಮಾ ಕಾರ್ಡ್<br>— ಖಾಸಗಿ ಸಾಲಗಳು<br>— ವ್ಯಾಪಾರೀ ಸಾಲಗಳು<br>— ಮನೆ ಮತ್ತು ವಾಹನ ಸಾಲಗಳು<br>— ಪರಸ್ಪರ ನಿಧಿಗಳ ನಿರ್ವಹಣೆ<br>— ಭರವಸೆಯ ಸೇವೆಗಳು<br>— ಭದ್ರತಾ ಕಪಾಟುಗಳ ನೀಡಿಕೆ<br>— ಸಹಿಗಳಿಗೆ ಜವಾಬ್ದಾರಿ ಹಾಕುವುದು (ಯಾವುದಾದರೂ ಎರಡು) | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| IV. | **ಆರು ವಾಕ್ಯಗಳಲ್ಲಿ ಉತ್ತರಿಸುವುದು :** 6 × 3 = 18 | |
| 50. | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಬ್ರಿಟಿಷರ ಆಡಳಿತ ಪದ್ಧತಿ ಮತ್ತು ಆರ್ಥಿಕ ನೀತಿ ಹೇಗೆ ಕಾರಣವಾದವು ? ವಿವರಿಸಿ.<br>***ಅಥವಾ***<br>ಬ್ರಿಟಿಷರ ಭೂ ಕಂದಾಯ ಪದ್ಧತಿಯು ಭಾರತೀಯ ರೈತರ ಮೇಲೆ ಹೇಗೆ ದುಷ್ಪರಿಣಾಮ ಬೀರಿತು ? ವಿವರಿಸಿ.<br>***ಉತ್ತರ :***<br>*ಆಡಳಿತ ಪದ್ಧತಿ :*<br>— ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳು ಭಾರತೀಯರಿಗೆ ಮಾತ್ರ ಅನ್ವಯವಾಗುತ್ತಿದ್ದವು.<br>— ಹೊಸ ಕಾನೂನುಗಳು ಜನಸಾಮಾನ್ಯರಿಗೆ ಅರ್ಥವಾಗಲಿಲ್ಲ.<br>— ಆಂಗ್ಲ ಭಾಷೆಯು ನ್ಯಾಯಾಲಯದ ಭಾಷೆಯಾಯಿತು.<br>— ಬ್ರಿಟಿಷ್ ನ್ಯಾಯಾಧೀಶರು ಬಹುತೇಕವಾಗಿ ಬ್ರಿಟಿಷರ ಪರವಾಗಿ ನ್ಯಾಯ ನೀಡಿಕೆ.<br>(ಮೂರು ಅಂಶಗಳು) 3 × ½<br>*ಆರ್ಥಿಕ ನೀತಿ :*<br>— ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿಯಿಂದ ಕರುಕುಶಲತೆ ಮತ್ತು ದೇಶೀಯ ಕೈಗಾರಿಕೆಗಳು ಕ್ಷೀಣಿಸಿದವು<br>— ಭಾರತದ ಕರಕುಶಲಗಾರರು ನಿರುದ್ಯೋಗಿಗಳಾದರು<br>— ಭಾರತದ ವಸ್ತುಗಳಿಗೆ ದುಬಾರಿ ಸುಂಕ<br>— ಜಮೀನ್ದಾರರಿಂದ ರೈತರ ಶೋಷಣೆ<br>— ತಾಲ್ಲೂಕುದಾರರಿಗೆ ನೀಡಿದ್ದ ಕಂದಾಯ ವಸೂಲಿ ಹಕ್ಕಿನ ಹಿಂಪಡೆತ<br>— ಇನಾಂ ಭೂಮಿಯನ್ನು ವಾಪಸ್ ಪಡೆದಿದ್ದು<br>— ಕೃಷಿಕರಿಗಾದ ಅವಮಾನ ಮತ್ತು ಆರ್ಥಿಕ ಸಂಕಷ್ಟ<br>(ಮೂರು ಅಂಶಗಳು) 3 × ½<br>***ಅಥವಾ*** | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಬ್ರಿಟಿಷರಿಂದ ಜಮೀನ್ದಾರಿ, ರೈತವಾರಿ ಮತ್ತು ಮಹಲ್ವಾರಿ ಪದ್ಧತಿಗಳ ಜಾರಿ<br>— ಜಮೀನ್ದಾರಿ ಪದ್ಧತಿಯಲ್ಲಿ ರೈತರಿಂದ ಭೂ ಒಡೆತನದ ಹಕ್ಕನ್ನು ಕಸಿದುಕೊಳ್ಳಲಾಯಿತು<br>— ಜಮೀನಿನ ಪ್ರಮಾಣದ ಆಧಾರದ ಮೇಲೆ ಕಂದಾಯ ನಿಗಧಿ<br>— ಜಮೀನ್ದಾರರಿಂದ ಹೆಚ್ಚಿನ ಕಂದಾಯ ವಸೂಲಿ – ರೈತರ ಶೋಷಣೆ<br>— ರೈತವಾರಿ ಪದ್ಧತಿಯಲ್ಲಿ ರೈತರು ಕಂದಾಯ ಕಟ್ಟಲು ವಿಫಲನಾದಾಗ ಭೂಮಿಯನ್ನು ಮಾರಾಟ ಮಾಡುವ ಅಧಿಕಾರ<br>— ಜಮೀನುಗಳಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ನ್ಯಾಯಾಲಯಗಳಲ್ಲಿ ಬಗೆಹರಿಸಿಕೊಳ್ಳಬೇಕಿತ್ತು<br>— ಮಹಲ್ವಾರಿ ಪದ್ಧತಿಯಲ್ಲಿ ಮಹಲ್ದಾರರಿಂದ ಹೆಚ್ಚಿನ ಕಂದಾಯ ವಸೂಲಿ – ರೈತರ ಶೋಷಣೆ<br>— ಒಟ್ಟಾರೆ ಎಲ್ಲಾ ಕಂದಾಯ ಪದ್ಧತಿಗಳ ಉದ್ದೇಶ – ರೈತರ ಶೋಷಣೆ ಮತ್ತು ಲಾಭಗಳಿಸಿಕೊಳ್ಳುವುದಾಗಿತ್ತು.<br>(ಯಾವುದಾದರೂ ಆರು) 6 × ½ | 3 |
| 51. | ‘ಇತ್ತೀಚಿನ ದಿನಗಳಲ್ಲಿ ಭಾರತ ಮತ್ತು ಚೀನಾಗಳ ನಡುವಣ ಸಂಬಂಧ ಹದಗೆಟ್ಟಿದೆ’ ಸ್ಪಷ್ಟೀಕರಿಸಿ.<br>***ಅಥವಾ***<br>‘ಮಾನವ ಹಕ್ಕುಗಳ ಪ್ರತಿಪಾದನೆಯಲ್ಲಿ ಭಾರತ ಪ್ರಮುಖ ಪಾತ್ರವಹಿಸುತ್ತಿದೆ.’ ಸ್ಪಷ್ಟೀಕರಿಸಿ.<br>***ಉತ್ತರ :***<br>— ಭಾರತದ ಧೋರಣೆಗೆ ವಿರುದ್ಧವಾಗಿ ಚೀನಾದಿಂದ ಟಿಬೆಟ್ಟಿನ ವಶ<br>— ಇಂಡೋ–ಚೀನಾ ಯುದ್ಧ 1962<br>— ಅರುಣಾಚಲ ಪ್ರದೇಶ ತನ್ನದೆಂಬ ಚೀನಾದ ಪ್ರತಿಪಾದನೆ<br>— ಮಾವೋವಾದಿ ಉಗ್ರಗಾಮಿಕತ್ವ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಅಂತರಾಷ್ಟ್ರೀಯ ಗಡಿ ರೇಖೆ ಇಲ್ಲದಿರುವುದು<br>— ವಾಸ್ತವಿಕ ನಿಯಂತ್ರಣ ರೇಖೆ ಮಾತ್ರ<br>— ಅಣ್ವಸ್ತ್ರಗಳ ತಯಾರಿ<br>— ವಿದೇಶೀ ವ್ಯಾಪಾರದ ಸವಾಲುಗಳು<br>— ಗಡಿಯಲ್ಲಿ ಮಿಲಿಟರಿ ಪಡೆಗಳ ಅತಿಕ್ರಮಣ<br>— ಜಲ ವಿವಾದ (ಯಾವುದಾದರೂ ಆರು) 6 × ½ | 3 |
| | ***ಅಥವಾ*** | |
| | — ಭಾರತದಿಂದ ಸಾರ್ವತ್ರಿಕ ಮಾನವ ಹಕ್ಕುಗಳ ನಿರಂತರ ಪ್ರತಿಪಾದನೆ<br>— ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ನೀಡಿಕೆ<br>— ಬದುಕುವ ಹಕ್ಕು, ಸ್ವಾತಂತ್ರ್ಯದ ಹಕ್ಕು, ಸ್ವರಕ್ಷಣೆಯ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳ ನೀಡಿಕೆ<br>— ಸಾಮಾನ್ಯ ಸಭೆಯಲ್ಲಿಯೂ ಮಾನವ ಹಕ್ಕುಗಳ ಪ್ರತಿಪಾದನೆ<br>— ಭಾರತವು ಜನಾಂಗೀಯ ಹತ್ಯೆಯನ್ನು ವಿರೋಧಿಸುತ್ತದೆ<br>— ಎಲ್ಲಾ ವಿಧದ ಶೋಷಣೆ ಮತ್ತು ದಬ್ಬಾಳಿಕೆಯನ್ನು ವಿರೋಧಿಸುತ್ತದೆ<br>— ವಿಶ್ವಸಂಸ್ಥೆಯ ಮೂಲಕ ಮಾನವ ಹಕ್ಕುಗಳ ಸಂರಕ್ಷಣೆಗೆ ಒತ್ತು | 3 |
| 52. | ನಿರುದ್ಯೋಗ ಸಮಸ್ಯೆಗೆ ಪರಿಹಾರೋಪಾಯಗಳನ್ನು ವಿವರಿಸಿ. | |
| | ***ಅಥವಾ*** | |
| | ಮಹಿಳಾ ಸ್ವ–ಸಹಾಯ ಸಮೂಹಗಳ ಪ್ರಾಮುಖ್ಯತೆಯನ್ನು ವಿವರಿಸಿ. | |
| | ***ಉತ್ತರ :*** | |
| | — ಜನಸಂಖ್ಯಾ ನಿಯಂತ್ರಣಾ ಕ್ರಮಗಳು<br>— ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ<br>— ಕೃಷಿ ಕ್ಷೇತ್ರದ ಅಭಿವೃದ್ಧಿ<br>— ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಶೈಕ್ಷಣಿಕ ಸುಧಾರಣಾ ಯೋಜನೆಗಳು | |
| | — ಪಂಚವಾರ್ಷಿಕ ಯೋಜನೆಗಳು | |
| | — ವೃತ್ತಿಪರ ಶಿಕ್ಷಣಕ್ಕೆ ಪ್ರೋತ್ಸಾಹ | |
| | — ಗ್ರಾಮೀಣಾಭಿವೃದ್ಧಿ ಯೋಜನೆಗಳು | |
| | — ಉದ್ಯೋಗ ಖಾತ್ರಿ ಯೋಜನೆ ಇತ್ಯಾದಿ... (ಯಾವುದಾದರೂ ಆರು) 6 × ½ | 3 |
| | ***ಅಥವಾ*** | |
| | — ಮಹಿಳಾ ಸ್ವ–ಸಹಾಯ ಸಮೂಹಗಳು ಸ್ವಪ್ರೇರಣೆ, ಸ್ವಪ್ರಯತ್ನ, ನಂಬಿಕೆ, ಸಹಕಾರದ ಆಧಾರದ ಮೇಲೆ ರಚನೆ | |
| | — ಮಹಿಳೆಯರಿಗೆ ಸಮಾನ ಹಕ್ಕು, ಅವಕಾಶ, ಹೊಣೆಗಾರಿಕೆ, ಅಧಿಕಾರ ನೀಡಿಕೆ | |
| | — ಆರ್ಥಿಕವಾಗಿ, ಸಾಮಾಜಿಕವಾಗಿ ಮಹಿಳೆಯರ ಸಬಲೀಕರಣ | |
| | — ಭಾರತ ಸರ್ಕಾರದ ಹಣಕಾಸು ಉದ್ಯಮದ ನವೀನ ರೂಪ | |
| | — ಶೈಕ್ಷಣಿಕ ಜಾಗೃತಿ–ಸ್ವಾವಲಂಬಿ ಜೀವನಕ್ಕೆ ಸಹಾಯ | |
| | — ದೌರ್ಜನ್ಯಗಳನ್ನು ಎದುರಿಸಲು ಸಹಾಯಕ | |
| | — ಅಭಿವೃದ್ಧಿ ಯೋಜನೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ | |
| | — ಸಾಮೂಹಿಕ ಹೊಣೆಗಾರಿಕೆ ಮೂಲಕ ಸಂಘರ್ಷ ನಿವಾರಣೆ ಮಾಡುವ ಸಾಮರ್ಥ್ಯ | |
| | — ಮಹಿಳೆಯರ ಪ್ರಜಾಸತ್ತಾತ್ಮಕ ಹಕ್ಕು, ಅಧಿಕಾರ, ಗೌರವಕ್ಕೆ ಪ್ರಾಮುಖ್ಯತೆ | |
| | — ಹಣಕಾಸಿನ ಸಹಾಯ (ಯಾವುದಾದರೂ ಆರು) 6 × ½ | 3 |
| 53. | ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನಿವಾರಿಸುವ ಪರಿಹಾರ ಕ್ರಮಗಳಾವುವು ? | |
| | ***ಅಥವಾ*** | |
| | ಭಾರತದ ರಸ್ತೆ ಸಾರಿಗೆಯ ತೊಡಕುಗಳಾವುವು ? | |
| | ***ಉತ್ತರ :*** | |
| | — ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಹೆಚ್ಚು ಬಳಕೆ | |
| | — ಜಲ ವಿದ್ಯುತ್ ಉತ್ಪಾದನೆಗೆ ಪ್ರಾಮುಖ್ಯತೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಬದಲೀ ಸ್ಥಳೀಯ ಸಂಪನ್ಮೂಲಗಳ ಬಳಕೆ<br>— ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಬಳಕೆಗೆ ಪ್ರೋತ್ಸಾಹ<br>— ಶಕ್ತಿ ಸಂಪನ್ಮೂಲಗಳ ಮಿತ ಬಳಕೆ<br>— ನಿರುಪಯುಕ್ತ ವಸ್ತುಗಳಿಂದ ವಿದ್ಯುತ್ ಉತ್ಪಾದನೆ | 3 |
| | ***ಅಥವಾ*** | |
| | — ಮಳೆಗಾಲದಲ್ಲಿ ವಾಹನ ಸಂಚಾರಕ್ಕೆ ಅನುಪಯುಕ್ತ<br>— ಪರಿಸರ ಮಾಲಿನ್ಯ<br>— ವಾಹನ ದಟ್ಟಣೆ ಮತ್ತು ಅಪಘಾತಗಳು<br>— ಮಳೆ, ಪ್ರವಾಹ, ಚಂಡಮಾರುತಗಳಿಂದ ಹಾಳಾಗುತ್ತವೆ<br>— ಅಸಮರ್ಪಕ ನಿರ್ಮಾಣ ಮತ್ತು ನಿರ್ವಹಣೆ<br>— ರಸ್ತೆಗಳ ಬದಿಯಲ್ಲಿ ಅವಶ್ಯಕ ಸೌಲಭ್ಯಗಳ ಕೊರತೆ | |
| 54. | ಸ್ವಾತಂತ್ರ್ಯಾನಂತರ ಭಾರತ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಹೇಗೆ ಶ್ರಮಿಸಿತು ? | |
| | ***ಅಥವಾ*** | |
| | ಗ್ರಾಮೀಣಾಭಿವೃದ್ಧಿಯು ದೇಶದ ಆರ್ಥಿಕ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ ? | |
| | ***ಉತ್ತರ :*** | |
| | — ನಿಯಂತ್ರಿತ ಅರ್ಥವ್ಯವಸ್ಥೆಯ ಜಾರಿ<br>— ಆರ್ಥಿಕ ಚಟುವಟಿಕೆಗಳ ಮೇಲೆ ನಿಯಂತ್ರಣ<br>— ಪ್ರಮುಖ ಹಾಗೂ ಮೂಲ ಕೈಗಾರಿಕೆಗಳ ಸ್ಥಾಪನೆ (ಕಬ್ಬಿಣ ಮತ್ತು ಉಕ್ಕು, ವಿದ್ಯುತ್, ಭಾರೀ ಯಂತ್ರೋಪಕರಣಗಳ ಕೈಗಾರಿಕೆ)<br>— ಖಾಸಗಿ ಕೈಗಾರಿಕೆಗಳ ಮೇಲೆ ನಿಯಂತ್ರಣ<br>— ಬಂಡವಾಳ ಹೂಡಿಕೆಯ ಮೇಲೆ ಮಿತಿ ಹೇರಿಕೆ<br>— ಸರಕು ಮತ್ತು ಸೇವೆಗಳ ಬೆಲೆಗಳ ನಿರ್ಧಾರ<br>— ಖಾಸಗಿ ಉದ್ಯಮಗಳ ಸ್ಥಾಪನೆಗೆ ಕಡ್ಡಾಯ ಪರವಾನಿಗೆ<br>— ದೇಶೀಯ ಉತ್ಪಾದಕರ ರಕ್ಷಣೆಗೆ ಆಮದುಗಳ ಮೇಲೆ ಹೆಚ್ಚು ತೆರಿಗೆ ವಿಧಿಸುವುದು<br>(ಯಾವುದಾದರೂ ಆರು) $6 \times \frac{1}{2}$ | 3 |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಗ್ರಾಮೀಣಾಭಿವೃದ್ಧಿಯು ಬಡತನ, ನಿರುದ್ಯೋಗ, ಅನಕ್ಷರತೆ, ಅನಾರೋಗ್ಯ ಸಮಸ್ಯೆಗಳನ್ನು ನಿವಾರಿಸುತ್ತದೆ<br>— ಶಿಕ್ಷಣ, ತರಬೇತಿ, ಆರೋಗ್ಯ, ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸುತ್ತದೆ<br>— ಕೃಷಿ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳ ಅಭಿವೃದ್ಧಿ<br>— ಗ್ರಾಮೀಣ ಜನರ ಜ್ಞಾನ, ಕೌಶಲ ಮತ್ತು ದುಡಿಯುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ<br>— ಗ್ರಾಮೀಣ ಜನರ ವಲಸೆಯನ್ನು ತಡೆಗಟ್ಟುತ್ತದೆ<br>— ವಿದ್ಯುತ್, ನೀರಾವರಿ, ಸಾರಿಗೆ–ಸಂಪರ್ಕ ಸೌಲಭ್ಯಗಳನ್ನು ಒದಗಿಸುತ್ತದೆ<br>— ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುತ್ತದೆ. ಕೃಷಿ ಉತ್ಪನ್ನಗಳ ಮೌಲ್ಯವನ್ನು ಹೆಚ್ಚಿಸುತ್ತದೆ<br>— ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಇತರ ಹಿಂದುಳಿದ ವರ್ಗದವರಿಗೆ ಉದ್ಯೋಗಾವಕಾಶ ಒದಗಿಸುತ್ತದೆ<br>— ಸಣ್ಣ ಕೈಗಾರಿಕೆ ಮತ್ತು ಗೃಹ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುತ್ತದೆ<br>— ನಗರಗಳಲ್ಲಿ ಲಭ್ಯವಿರುವ ಎಲ್ಲಾ ಸೌಲಭ್ಯಗಳೂ ದೊರೆಯುವಂತೆ ಮಾಡುತ್ತದೆ<br>— ಅಭಿವೃದ್ಧಿಯ ಫಲವನ್ನು ಸಮಾನವಾಗಿ ಒದಗಿಸುತ್ತದೆ<br>— ಕೃಷಿಯನ್ನು ಒಂದು ಲಾಭದಾಯಕ ಮತ್ತು ಆಕರ್ಷಕ ಉದ್ಯೋಗವನ್ನಾಗಿ ಮಾಡುತ್ತದೆ<br>(ಯಾವುದಾದರೂ ಆರು) 6 × ½ | 3 |
| 55. | ವಿಮೆಯ ಪ್ರಯೋಜನಗಳಾವುವು ?<br>***ಅಥವಾ***<br>ಉದ್ಯಮಿ / ಉದ್ಯಮಗಾರಿಕೆಯ ಗುಣಲಕ್ಷಣಗಳಾವುವು ?<br>***ಉತ್ತರ :***<br>— ಯುಕ್ತ / ವಿವೇಚನೆಯ ಲಾಭ ಗಳಿಕೆ<br>— ರಕ್ಷಣಾ ಮನೋಭಾವ<br>— ಉದ್ಯೋಗಾವಕಾಶ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಆಸ್ತಿ / ಸ್ವತ್ತಿನ ಸುರಕ್ಷತೆ<br>— ಸಾಮಾಜಿಕ ಸಮಸ್ಯೆಗಳ ಪರಿಹಾರ<br>— ಬಡವ–ಶ್ರೀಮಂತ ತಾರತಮ್ಯ ಇರುವುದಿಲ್ಲ<br>— ಸಂಶೋಧನಾ ಕಾರ್ಯಗಳಿಗೆ ಸಹಾಯ<br>— ನಷ್ಟವನ್ನು ತಪ್ಪಿಸುತ್ತದೆ<br>— ಆರ್ಥಿಕ ಬೆಳವಣಿಗೆಗೆ ಉತ್ತೇಜನ<br>— ವ್ಯಾಪಾರದ ಪೈಪೋಟಿಗೆ ಉತ್ತೇಜನ<br>— ಅಂತರಾಷ್ಟ್ರೀಯ ವ್ಯಾಪಾರಕ್ಕೆ ಪ್ರೋತ್ಸಾಹ (ಯಾವುದಾದರೂ ಆರು) 6 × ½ | 3 |
| | **ಅಥವಾ** | |
| | — ಸೃಜನಾತ್ಮಕ<br>— ಕ್ರಿಯಾತ್ಮಕ<br>— ಗುಂಪು ಕಟ್ಟುವುದು<br>— ಸಮಸ್ಯೆಯ ಪರಿಹಾರ<br>— ನಷ್ಟ ಭರಿತಕ್ಕೆ ಸಿದ್ಧ<br>— ವಚನ ಬದ್ಧತೆ<br>— ಹೊಸ ಪದ್ಧತಿಯನ್ನು ರೂಢಿಸಿ ತರುವುದು<br>— ನಾಯಕತ್ವ<br>— ಪ್ರಚೋದನೆಯ ಸಾಧನೆ<br>— ಗುರಿಮುಟ್ಟುವಿಕೆ<br>— ನಿರ್ಧಾರಗಳನ್ನು ಕೈಗೆತ್ತಿಕೊಳ್ಳುವುದು (ಯಾವುದಾದರೂ ಆರು) 6 × ½ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| V. | ***ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :*** $1 \times 4 = 4$ | |
| 56. | ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸ್‌ರವರ ಪಾತ್ರವನ್ನು ವಿವರಿಸಿ. | |
| | ***ಉತ್ತರ :*** | |
| | — ನೇತಾಜಿಯವರು ಕ್ರಾಂತಿಕಾರಿ ಹೋರಾಟಗಾರರಲ್ಲಿ ಪ್ರಮುಖರು | |
| | — ವಿಯನ್ನಾ, ಬರ್ಲಿನ್‌ಗೆ ಪ್ರವಾಸ – ಭಾರತೀಯ ಸಂಘಟನೆ | |
| | — ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನೆ | |
| | — ಹರಿಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ | |
| | — ಬ್ರಿಟಿಷರ ಯುದ್ಧ ನೀತಿಯ ಬಗ್ಗೆ ಗಾಂಧೀಜಿಯ ಮೃದು ಧೋರಣೆಗೆ ವಿರೊಧ | |
| | — ತ್ರಿಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ | |
| | — 'ಫಾರ್ವರ್ಡ್ ಬ್ಲಾಕ್' ಪಕ್ಷದ ಸ್ಥಾಪನೆ | |
| | — ಬ್ರಿಟಿಷರ ಯುದ್ಧ ತಯಾರಿ ಮತ್ತು ಯುದ್ಧದಲ್ಲಿ ಭಾರತೀಯರ ಪಾಲ್ಗೊಳ್ಳುವಿಕೆಗೆ ವಿರೋಧ | |
| | — ಹಿಟ್ಲರ್‌ನಿಂದ ಸಹಾಯ ಪಡೆಯುವಿಕೆ | |
| | — ಜರ್ಮನಿಯಲ್ಲಿ ಭಾರತೀಯ ಯುದ್ಧ ಖೈದಿಗಳ ಸಂಘಟನೆಗೆ ಪ್ರಯತ್ನ | |
| | — ಐ.ಎನ್.ಎ. ದ ನಾಯಕತ್ವ – ಕ್ಯಾಪ್ಟನ್ ಲಕ್ಷ್ಮೀ ಝಾನ್ಸಿ ರೆಜಿಮೆಂಟಿನ ನೇತೃತ್ವ | |
| | — 'ದೆಹಲಿ ಚಲೋ', 'ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡುತ್ತೇನೆ' | |
| | — ರಂಗೂನಿನ ಮೂಲಕ ಯುದ್ಧ ತಂತ್ರ | |
| | — ಬರ್ಮಾದ ಗಡಿಯಲ್ಲಿ ತೀವ್ರ ಯುದ್ಧ | |
| | — ವಿಮಾನ ಅಪಘಾತದಲ್ಲಿ ಮರಣ (ಯಾವುದಾದರೂ ಎಂಟು) $8 \times \frac{1}{2}$ | 4 |


| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

VI. 57. **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** $1 + 3 = 4$

a) $23\frac{1}{2}^{o}$ ಉತ್ತರ ಅಕ್ಷಾಂಶ

b) ನಾಗಾರ್ಜುನ ಸಾಗರ ಯೋಜನೆ

c) ಭದ್ರಾವತಿ




***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 57ರ ಬದಲಿಗೆ)***

ಭಾರತೀಯರ ಜನಜೀವನಕ್ಕೆ ಹಿಮಾಲಯ ಪರ್ವತದಿಂದಾಗುವ ಅನುಕೂಲಗಳೇನು ?

i) ರಕ್ಷಣೆ ಒದಗಿಸಿದೆ

ii) ಶೀತಗಾಳಿಯನ್ನು ತಡೆಯುವುದು

iii) ನದಿಗಳ ಉಗಮಸ್ಥಾನ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | iv) ಜಲವಿದ್ಯುತ್ ಉತ್ಪಾದನೆ | |
| | v) ವಿಶಾಲ ಮೈದಾನ | |
| | vi) ವೈವಿಧ್ಯಮಯ ಸಸ್ಯವರ್ಗ | |
| | vii) ಅಪಾರ ಖನಿಜ ಸಂಪನ್ಮೂಲ | |
| | viii) ಪ್ರವಾಸೋದ್ಯಮ, ಧಾರ್ಮಿಕ ಕೇಂದ್ರ | 4 |